ಓ ಎಸ್ ನಂಃ 28/2015
**ಪಿ ಡಬ್ಲ್ಯೂ ಃ 1**

**ದಿಃ 29.08.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ರ ಪರ ಶ್ರೀ ಕೆ ಎಲ್ ಎಸ್ ವಕೀಲರಿಂದ :-**

ನಿ ಪಿ 1 ರ ದಾಖಲಾತಿಯನ್ನು ಬರೆಯುವ ಕಾಲದಲ್ಲಿ ಯಾವ ಯಾವ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಪಹಣಿ ಪತ್ರಿಕೆಗಳು ಮತ್ತು ವಿಭಾಗ ಪತ್ರವನ್ನು ಪರಿಶೀಲನೆ ಮಾಡಿರುತ್ತೇನೆ. 1 ನೇ ಪ್ರತಿವಾದಿ ಕುಟುಂಬದ ವಂಶವೃಕ್ಷವನ್ನು ಪರಿಶೀಲನೆ ಮಾಡಿರುತ್ತೇನೆ. 1 ನೇ ಪ್ರತಿವಾದಿಗೆ ಒಬ್ಬರು ಅಕ್ಕ ಇರುತ್ತಾರೆ. 1 ನೇ ಪ್ರತಿವಾದಿಯ ಅಕ್ಕನ ಸಹಿ ನಿಪಿ1 ರ ದಾಖಲಾತಿಯಲ್ಲಿ ಇಲ್ಲ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯು 1 ನೇ ಪ್ರತಿವಾದಿಗೆ ಪಿತ್ರಾರ್ಜಿತ ಆಸ್ತಿ ಎಂದು ಪರಿಶೀಲನೆ ಮಾಡಿರುವುದಿಲ್ಲ ಉದ್ದೇಶಪೂರ್ವಕವಾಗಿ ನಿಪಿ 1 ರ ದಾಖಲಾತಿಯನ್ನು 1 ನೇ ಪ್ರತಿವಾದಿಯಿಂದ ಬರೆಸಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಈ ದಾವೆಯ ನಿಪಿ 1 ಕ್ರಯದ ಕರಾರು ಪತ್ರವನ್ನು ಬರೆಯುವ ಕಾಲಕ್ಕೆ ನಾನು ಸಹ ಹಾಜರಿದ್ದೆ. ನಿಪಿ 1 ರ ದಾಖಲಾತಿಯು ಮಾಗಡಿ ಪಟ್ಟಣದಲ್ಲಿ ಬರೆಯಲಾಯಿತು. ಆ ಸಮಯದಲ್ಲಿ ನನ್ನನ್ನು ಹೊರತು ಪಡಿಸಿ ಸಾಕ್ಷಿದಾರರು ಹಾಜರಿದ್ದರು. ನಿಪಿ 1 ರ ಸಾಕ್ಷಿದಾರರ ಸಮಕ್ಷಮ ಕ್ರಯದ ಕರಾರು ಒಪ್ಪಂದವನ್ನು ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ 1 ನೇ ವಾದಿಯು ಹಾಜರಿದ್ದು ನಿಪಿ 1 ದಾಖಲಾತಿಗೆ ಸಹಿ ಮಾಡಿದ್ದಾರೆ ಎಂದರೆ ಸರಿ. ಆ ಸಮಯದಲ್ಲಿ ವಾದಿಗೆ ನಿಪಿ 1 ರ ದಾಖಲಾತಿಯಲ್ಲಿ ನಮೂದು ಆಗಿರುವ ಸಾಕ್ಷಿ ದಾರರ ಮುಖ ಪರಿಚಯ ಇದೆ ಎಂದರೆ ಸರಿ. ವಾದಿಯವರಿಗೆ ನಿಪಿ 1 ರ ದಾಖಲಾತಿಯಲ್ಲಿ ಇರುವ ಸಾಕ್ಷಿದಾರರನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಲ್ಲಿರುವ ಸಾಕ್ಷಿದಾರು ತಮಗೆ ಪರಿಚಯದವರು ಎಂದರೆ ಸಾಕ್ಷಿಯು ಇಬ್ಬರು ಪಕ್ಷಗಾರರಿಗೆ ಗೊತ್ತಿರುವವರಾಗಿರುತ್ತಾರೆ. ಈ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆಯುವ ಸಮಯದಲ್ಲಿ ಯಾರು ಮಧ್ಯವರ್ತಿಗಳಾಗಿ ಪ್ರತಿಫಲವನ್ನು ನಿಗದಿ ಮಾಡಿದ್ದಾರೆ ಎಂದರೆ ಸಾಕ್ಷಿ ಕೆ ವಿ ಸಿದ್ದರಾಜು ಎಂದು ಸಾಕ್ಷ್ಯ ನುಡಿಯುತ್ತಾರೆ. ಆ ಸಮಯದಲ್ಲಿ ನಾವು ಮತ್ತು ನನ್ನ ಶ್ರೀಮತಿ ಮತ್ತು ಜಯಣ್ಣರವರು ಹಾಜರಿದ್ದರು. ತಮ್ಮ ಮತ್ತು 1 ನೇ ಪ್ರತಿವಾದಿಯ ನಡುವೆ ಹಲವಾರು ಬಾರಿ ಗಲಾಟೆಗಳಾಗಿದ್ದು ಪೋಲಿಸ್ ಠಾಣೆಯಲ್ಲಿ ದೂರುಗಳು ದಾಖಲಾಗಿವೆಯಾ ಎಂದರೆ ಸಾಕ್ಷಿಯು ಈ ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲಾ ಎಂದು ಸಾಕ್ಷ್ಯ ನುಡಿಯುತ್ತಾರೆ. ದಾವಾ ಆಸ್ತಿಯನ್ನು ಹೊರತು ಪಡಿಸಿ 1 ನೇ ಪ್ರತಿವಾದಿಗೆ ಸೇರಿದ ಇತರೆ ಆಸ್ತಿಗಳನ್ನು ನಾನು

ಬರೆಸಿಕೊಂಡಿರುವುದಿಲ್ಲ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹಾಗೂ ಬೇರೆ ಆಸ್ತಿಗೆ ಸಂಬಂಧಪಟ್ಟಂತೆ 1 ನೇ ಪ್ರತಿವಾದಿಯ ಮಗ ಭಾಗಾಂಶ ಕೋರಿ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 1 ರ ದಾಖಲಾತಿಯನ್ನು ಬರೆಯುವುದಕ್ಕಿಂತ ನಾನು 1 ನೇ ಪ್ರತಿವಾದಿಗೆ ಹಣವನ್ನು ನೀಡಿರುವುದಿಲ್ಲ. 1 ನೇ ಪ್ರತಿವಾದಿಯು ನನ್ನಿಂದ ಹಲವಾರು ಬಾರಿ ಸಾಲದ ರೂಪದಲ್ಲಿ ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ತಾವು ಪ್ರತಿವಾದಿಯಿಂದ ಹಲವಾರು ಬಡ್ಡಿಯನ್ನು ಪಡೆದಿದ್ದೀರಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ಕನ್ನಡ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ ಎಂದು ಸಾಕ್ಷ್ಯ ನುಡಿಯುತ್ತಾರೆ. 1 ನೇ ಪ್ರತಿವಾದಿಯು ವಾದಿಗೆ ಪರಿಚಯ ಇಲ್ಲ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಗೆ ನಗದು ರೂಪದಲ್ಲಿ ಹಣವನ್ನು ನೀಡಿರುತ್ತೇನೆ. ನಿಪಿ 1 ರ ದಾಖಲಾತಿಯನ್ನು 1 ನೇ ಪ್ರತಿವಾದಿಯು ಬರೆದುಕೊಟ್ಟಿಲ್ಲದಿದ್ದರೂ ಸಹ ನಿಪಿ 1 ರ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಷರಾವನ್ನು ಬರೆಯಲು ಷರಾ ಬರೆಸಿರುವ ಹಿಂದಿನ ಹಾಳೆಯಲ್ಲಿ ಜಾಗ ಇತ್ತು ಎಂದರೆ ಸಾಕ್ಷಿ ಜಾಗ ಇಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಸಹಿ ಮತ್ತು ಮೊದಲನೇ ಸಾಕ್ಷಿದಾರನ ಸಹಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ತಾವು 1 ನೇ ಪ್ರತಿವಾದಿಗೆ ರೂ. 50,000/- ಹಣವನ್ನು ಸಾಲವಾಗಿ ಕೊಟ್ಟಿದ್ದು ಆದರೆ ನಿಪಿ1 ರ ದಾಖಲಾತಿಯನ್ನು ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಪಕ್ಕದಲ್ಲಿ ತಮಗೆ ಸೇರಿದ ಆಸ್ತಿ ಇದೆ ಎಂದರೆ ಸರಿಯಲ್ಲ. ನಿಪಿ 1 ಬರೆದಿರುವ ಒಕ್ಕಣೆ ಮತ್ತು ಷರಾವನ್ನು ಭೀಮರಾವ್ ಷರಾ ಬರೆದಿರುತ್ತಾರೆ. ನಿಪಿ1 ರ ಕರಾರಿಗೆ ಮತ್ತು ಷರಾ ಬರೆಯಲು ಅಂತರ ಸುಮಾರು 8 ತಿಂಗಳು. ಷರಾ ಬರೆಯುವ ಸಮಯದಲ್ಲಿ ಸಹಿ ಮಾಡುವವರನ್ನು ಹೊರತು ಪಡಿಸಿ ಬೇರೆ ಯಾರು ಇಲ್ಲ ಎಂದರೆ ಸರಿ. ತಾವು ಈಗಾಗಲೇ 1 ನೇ ಪ್ರತಿವಾದಿಯಿಂದ ಒಂದು ಜಮೀನನ್ನು ಕೊಂಡುಕೊಂಡಿದ್ದು ದಾವಾ ಆಸ್ತಿಗಳನ್ನು ಕಬಳಿಸುವ ಉದ್ದೇಶದಿಂದ ನಿಪಿ 1 ರ ದಾಖಲಾತಿಯನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ವಾದಿಗೆ ಕರಾರು ಪತ್ರದಲ್ಲಿ ನಮೂದು ಮಾಡಿರುವ ಹಣವನ್ನು ಕೊಡಲು ಆರ್ಥಿಕ ಶಕ್ತಿ ಇಲ್ಲ ಎಂದರೆ ಸರಿಯಲ್ಲ. ವಾದಿಯು ಕರಾರು ಮಾಡಿಕೊಳ್ಳುವ ಸಮಯದಲ್ಲಿ ನಾನು ಹಣವನ್ನು ಕೊಟ್ಟಿರುತ್ತೇನೆ. 1 ನೇ ಪ್ರತಿವಾದಿಗೆ ಕರಾರು ಪತ್ರದಲ್ಲಿ ನಮೂದು ಮಾಡಿರುವ ಆಸ್ತಿಯನ್ನು ಮಾರಾಟ ಮಾಡುವ

ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇರುವ ಕಾರಣ ತಮ್ಮಿಂದ ಬಡ್ಡಿಗಾಗಿ ರೂ. 50,000/- ಹಣವನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮಗೆ ರೂ. 50,000/- ಸಾಲದ ಹಣ ಮತ್ತು ಬಡ್ಡಿಯನ್ನು ನೀಡಲು ಬಂದಾಗ ತಾವು ಹಣ ಬೇಡ ಜಮೀನು ಬೇಕು ಎಂದು ಹೇಳಿದ್ದೀರಿ ಎಂದರೆ ಸರಿಯಲ್ಲ. ನಿಪಿ 1 ಕರಾರು ಪತ್ರವನ್ನು ಮಾಡುವ ಸಂದರ್ಭದಲ್ಲಿ ವಾದಿಯು ಅಲ್ಲಿ ಹಾಜರಿರಲಿಲ್ಲ ಮತ್ತು ಆಕೆಗೆ ಏನು ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ನಿಪಿ 1 ರ ಬಗ್ಗೆ ಗೊತ್ತಿಲ್ಲದ ಕಾರಣ ತಾವು ಅಧಿಕಾರ ಪತ್ರವನ್ನು ಪಡೆದು ತಾವು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಸಿ ಕೆ ಆರ್ ವಕೀಲರಿಂದಃ-**

ದಾವಾ ಆಸ್ತಿಯು ಪ್ರತಿವಾಗಳ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ . ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಭಾಗಾಂಶ ಇದೆ ಎಂದರೆ ಸರಿ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯನ್ನು ಪೋಷಣೆ ಮಾಡುತ್ತಿಲ್ಲ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು 1 ಮತ್ತು 5 ನೇ ಪ್ರತಿವಾದಿಗಳ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 218/2013 ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯನ್ನು ಹೊರತು ಪಡಿಸಿ ಪ್ರತಿವಾದಿಗಳಿಗೆ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ಭಾಗ ಕೊಡಬಾರದು ಎಂಬ ಉದ್ದೇಶದಿಂದ ವಾದಿ ಮತ್ತು 1 ನೇ ಪ್ರತಿವಾದಿಯು ಶಾಮೀಲಾಗಿ ನಿ ಪಿ 1 ರ ಕ್ರಯದ ಕರಾರು ಪತ್ರವನ್ನು ಸೃಷ್ಟಿಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ ವೈಯಕ್ತಿಕವಾಗಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

ಮಾಗಡಿ.